ಅಸಲು ದಾವಾ ಸಂಖ್ಯೆ 279/2026

ಪಿ.ಡಬ್ಲ್ಯೂ-1

**ದಿಃ 18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ALK ವಕೀಲರಿಂದಃ-**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ. ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

4ನೇ ಪ್ರತಿವಾದಿಯ ಶಾಲೆಯಿಂದ ನೀಡಿದ ವಾದಿಯ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ1 ಎಂದು ಗುರುತಿಸಲಾಯಿತು.

ವಾದಿಯ 10ನೇ ತರಗತಿಯ ಅಂಕಪಟ್ಟಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ2 ಎಂದು ಗುರುತಿಸಲಾಯಿತು.

5ನೇ ಪ್ರತಿವಾದಿಯ ಶಾಲೆಯಿಂದ ನೀಡಿದ ವಾದಿಯ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ3 ಎಂದು ಗುರುತಿಸಲಾಯಿತು.

ವಾದಿಯ ಕುಟುಂಬದ ಜೀವಂತ ಸದಸ್ಯರ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ4 ಎಂದು ಗುರುತಿಸಲಾಯಿತು.

ವಾದಿಯ ಮಗಳ ಪಿಯುಸಿ ಅಂಕಪಟ್ಟಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ5 ಎಂದು ಗುರುತಿಸಲಾಯಿತು.

ವಾದಿಯ ಮಗನ 12ನೇ ತರಗತಿಯ ಅಂಕಪಟ್ಟಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ6 ಎಂದು ಗುರುತಿಸಲಾಯಿತು.

ವಾದಿಯ ಕೆಲಸದ ಗುರುತಿನ ಚೀಟಿಯನ್ನು ಪಿಯುಸಿ ಅಂಕಪಟ್ಟಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ7 ಎಂದು ಗುರುತಿಸಲಾಯಿತು.

ಅಸಲು ದಾವಾ ಸಂಖ್ಯೆ 279/2026

ಪಿ.ಡಬ್ಲ್ಯೂ-1

ವಾದಿಯ ಪಾನ್ ಕಾರ್ಡ್ ನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ8 ಎಂದು ಗುರುತಿಸಲಾಯಿತು.

ವಾದಿಯ ಆಧಾರ್ ಕಾರ್ಡ್‌ನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ9 ಎಂದು ಗುರುತಿಸಲಾಯಿತು.

5ನೇ ಪ್ರತಿವಾದಿಯ ಶಾಲೆಯವರು ವಾದಿಯ ಅರ್ಜಿಗೆ ನೀಡಿದ ಉತ್ತರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ10 ಎಂದು ಗುರುತಿಸಲಾಯಿತು.

ವಾದಿಯ ಫೆಬ್ರುವರಿ 2026 ರ ಪೇ ಸ್ಲಿಪ್ ನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಎಡಿಜಿಪಿ ರವರಿಂದಃ**

ನಾನು ಕಡೋಲಿಯಲ್ಲಿ ವಾಸವಾಗಿರುತ್ತೇನೆ. ನಾನು 1ನೇ ತರಗತಿಯನ್ನು 4ನೇ ಪ್ರತಿವಾದಿಯ ಶಾಲೆಯಲ್ಲಿ ಕಲಿತಿರುತ್ತೇನೆ. ನನ್ನ ಹೆಸರಿನ ಬಗ್ಗೆ ನನ್ನ ತಂದೆ-ತಾಯಿಯು ನೀಡಿದ ಮಾಹಿತಿಯಂತೆ ಸದರಿ ಶಾಲೆಯವರು ನನ್ನನ್ನು ಶಾಲೆಗೆ ಸೇರಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ-ತಾಯಿಯವರು ನನ್ನ ಸರಿಯಾದ ಹೆಸರನ್ನು ನೀಡಿದ್ದು, ಶಾಲೆಯವರು ಅದನ್ನು ತಪ್ಪಾಗಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪ್ರಸ್ತುತವಾಗಿ ಬಿ.ಎಸ್.ಎಫ್ ಸಂಸ್ಥೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ನನ್ನ ಹೆಸರು ಶಾಲಾ ದಾಖಲಾತಿಗಳಲ್ಲಿ ತಪ್ಪಾಗಿರುವ ಬಗ್ಗೆ 2 ಮತ್ತು 3ನೇ ಪ್ರತಿವಾದಿಯರ ಬಳಿ ಕೇಳಿರುತ್ತೇನೆಯೇ ಎಂದರೆ ಸಾಕ್ಷಿಯು ನಾನು ಮೌಖಿಕವಾಗಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ.

2. ನನ್ನ ಸರ್ವಿಸ್ ದಾಖಲಾತಿಗಳಲ್ಲಿ ನನ್ನ ಹೆಸರು Sahadev ಎಂದು ಇರುತ್ತದೆ. ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 1 ರಿಂದ 7ನೇ

ತರಗತಿಯನ್ನು 4ನೇ ಪ್ರತಿವಾದಿಯ ಶಾಲೆಯಲ್ಲಿ ಕಲಿತಿರುತ್ತೇನೆ. ನಾನು 8 ರಿಂದ 10ನೇ ತರಗತಿಯನ್ನು 5ನೇ ಪ್ರತಿವಾದಿಯ ಶಾಲೆಯಲ್ಲಿ ಕಲಿತಿರುತ್ತೇನೆ. ನಾನು 7ನೇ ತರಗತಿಯಿಂದ ತೇರ್ಗಡೆಯಾಗಿ 8ನೇ ತರಗತಿಗೆ ದಾಖಲಾಗುವ ಸಮಯದಲ್ಲಿ ನನ್ನ ಹೆಸರು Sahadeo ಎಂದು ತಪ್ಪಾಗಿರುವ ಬಗ್ಗೆ ತಿಳಿದಿತ್ತು ಎಂದರೆ ಸರಿಯಲ್ಲ. ಶಾಲಾ ದಾಖಲಾತಿಗಳಲ್ಲಿ ನನ್ನ ಹೆಸರು ತಪ್ಪಾಗಿರುವ ಬಗ್ಗೆ ಪ್ರತಿವಾದಿಯರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೇ ಸರಿ ಇದೆ.**

**Sd/-**
**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**